**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.278/2021

**PW**. 3

**CW**. 5

**ಸಾಕ್ಷಿಯ ಹೆಸರು –ಕಮಲಮ್ಮ**

**ಗಂಡನ ಹೆಸರು –ಈರಯ್ಯ**

**ವಯಸ್ಸು –51 ವರ್ಷಗಳು** ದಿನಾಂಕ 07–01–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಗೃಹಿಣಿ**

**ವಾಸಸ್ಥಳ –ಚಿಕ್ಕ ಬ್ಯಾಳಾಲು , ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ರಿಂದ 3 ಹಾಗೂ ಆರೋಪಿತರು ಗೊತ್ತು. ಈಗ್ಗೆ 4 ವರ್ಷಗಳ ಹಿಂದೆ ಸಂಜೆ 7.00 ಗಂಟೆ ಸುಮಾರಿಗೆ ಜಾಗದ ವಿಚಾರದಲ್ಲಿ ಚಾಸಾ–1 ಮತ್ತು ಆರೋಪಿತರು ರಸ್ತೆಯಲ್ಲಿ ಜಗಳ ಮಾಡುತ್ತಿದ್ದರು. ನಾನು ನಮ್ಮ ಮನೆಯಿಂದ ಜಗಳ ಶಬ್ದ ಕೇಳಿ ಸ್ಥಳಕ್ಕೆ ಹೋದೆ. ಜಗಳದಲ್ಲಿ 1 ನೇ ಆರೋಪಿಯು ಮಚ್ಚಿನಿಂದ ಚಾಸಾ–3 ರವರ ತಲೆಯ ಮೇಲೆ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿದ. ಆಗ ಚಾಸಾ–1 ಮತ್ತು 2 ರವರು ಜಗಳ ಬಿಡಿಸಲು ಹೋದರು. 2 ಮತ್ತು 3 ನೇ ಆರೋಪಿತರು ಜಗಳ ಬಿಡಿಸಲು ಬಂದ ಚಾಸಾ–1 ಮತ್ತು 2 ರವರ ಕೈ ಮತ್ತು ತಲೆಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆಗ ಚಾಸಾ–2 ಮತ್ತು 3 ರವರ ತಲೆಗೆ ರಕ್ತ ಗಾಯವಾಗಿತ್ತು. ಖಾಲಿ ಜಾಗದ ವಿಷಯವಾಗಿ ಆರೋಪಿತರು ಆಗಿಂದಾಗೆ ಜಗಳ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ಚಾಸಾ–1 ರಿಂದ 3 ರವರಿಗೆ ಹಲ್ಲೆ ಮಾಡಿದ ಮಚ್ಚು ಮತ್ತು ಎರಡು ದೊಣ್ಣೆಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ–1 ರಿಂದ 3 ಎಂದು ಗುರುತಿಸಲಾಗಿದೆ. ನಂತರ ನನ್ನ ಮಗ ಶಂಕರ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿರುತ್ತಾನೆ.

ಮರುದಿನ ಪೊಲೀಸರು ನಮ್ಮ ಊರಿಗೆ ಮಧ್ಯಾಹ್ನದ ಸಮಯದಲ್ಲಿ ಬಂದಿದ್ದು , ಕೃತ್ಯ ನಡೆದ ಸ್ಥಳದಲ್ಲಿ ರಕ್ತಸಿಕ್ತ ಮಣ್ಣು ಹಾಗೂ ಸಾದಾ ಮಣ್ಣನ್ನು ಜಪ್ತಿ ಮಾಡಿದರು. ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಮು.ಮಾ–1 ರಿಂದ 3 ಗಳನ್ನು ನಾನು ಎತ್ತಿಟ್ಟಿದ್ದು, ಪೊಲೀಸರಿಗೆ ನೀಡಿರುತ್ತೇನೆ. ಅವುಗಳನ್ನು ಪೊಲೀಸರು ಜಪ್ತಿ ಮಾಡಿ, ಪಂಚನಾಮೆ ಮಾಡಿ, ನನ್ನ ಹೆಬ್ಬೆಟ್ಟಿನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–2 ಎಂದು ಗುರುತಿಸಲಾಯಿತು. ಪಂಚನಾಮೆಗೆ ನಮ್ಮ ಊರಿನ ಇಬ್ಬರು ಸಹಿ ಮಾಡಿದ್ದು, ಅವರು ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಪೊಲೀಸರು ಎರಡು ಪೋಟೋಗಳನ್ನು ತೆಗೆದಿದ್ದು, ಅದರಲ್ಲಿ ನಾನು ಮು.ಮಾ–1 ರಿಂದ 3 ಗಳನ್ನು ಪೊಲೀಸರಿಗೆ ನೀಡುವ ದೃಶ್ಯ ಕಂಡುಬರುತ್ತದೆ. ಸದರಿ ಪೋಟೋಗಳನ್ನು ನಿಪಿ–3 ಮತ್ತು 4 ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸಮಯದಲ್ಲಿ ಬೀದಿ ದೀಪ, ಆರೋಪಿತರ ಮನೆಯ ಲೈಟ್ ನ ಬೆಳಕು ಇತ್ತು. ಅಕ್ಕಪಕ್ಕದ ಜನರು ನಂತರ ಬಂದಿರುತ್ತಾರೆ. ಪೊಲೀಸರು ಜಪ್ತಿ ಮಾಡಿದ ಸದರಿ ರಕ್ತಸಿಕ್ತ ಮಣ್ಣು ಹಾಗೂ ಸಾದಾ ಮಣ್ಣನ್ನು ಈಗ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ, ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಮು.ಮಾ–6 ಹಾಗೂ 7 ಎಂದು ಗುರುತಿಸಲಾಯಿತು. ಆ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಆರೋಪಿತರ ಪರ ವಕೀಲರು ಸಮಯ ಕೇಳಿದ್ದರಿಂದ ರೂ. 1000/– ವೆಚ್ಚದ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.